**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 20.01.2026**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

1. ಅಪಘಾತವಾದ ದಿನ ವಿಕ್ರಾಂತ್ ಪ್ಯಾಕ್ಟರಿಗೆ ನಾಗಮಂಗಲ ಪಾಂಡವಪುರ ರಸ್ತೆಯಲ್ಲಿ ನನ್ನ ಸ್ನೇಹಿತನ ಎಕ್ಸ್ ಎಲ್ ಮೊಪೆಡ್ ನಲ್ಲಿ ನಾನು ಒಬ್ಬನೇ ಹೋಗುತ್ತಿದ್ದೆನು. ಅದರ ನೋಂದಣಿ ಸಂಃ 3455. ನನಗೆ ಡಿ ಎಲ್ ಇಲ್ಲ. ಕಾರಿಗೂ ಮತ್ತು ಸ್ಕೂಟರಿಗೂ ಅಪಘಾತವಾಯಿತು. ಕಾರು ಮುಂದಿನ ಭಾಗದಿಂದ ಬಂದು ಅಪಘಾತ ಪಡಿಸಿತು. ಕಾರಿನ ನೋಂದಣಿ ಸಂಖ್ಯೆಯನ್ನು ನನಗೆ ಹೇಳಲಾಗುವುದಿಲ್ಲ. ಅಪಘಾತದಿಂದ ಎರಡು ಮಂಡಿಗಳಿಗೆ ಪೆಟ್ಟಾಯಿತು. ನನ್ನ ಸ್ಕೂಟರಿನ ಹಿಂದೆ ಬರುತ್ತಿದ್ದ ಒಂದು ಕಾರಿಗೂ ಎದುರುಭಾಗದಿಂದ ಬಂದ ಕಾರು ಡಿಕ್ಕಿ ಪಡಿಸಿತು. ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡೆನು. ನಂತರ ಆಲ್ಪಾ ಆಸ್ಪತ್ರೆ ಮೈಸೂರಿಗೆ ಕರೆದುಕೊಂಡು ಹೋದರು. ಎರಡು ಕಾಲುಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿದರು. ಒಂದು ವಾರ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆನು.

2. ಆಸ್ಪತ್ರೆ ಖರ್ಚು ರೂ.5 ಲಕ್ಷವಾಯಿತು. ವಿಕ್ರಾಂತ್ ಪ್ಯಾಕ್ಟರಿಯಲ್ಲಿ ಕಂಟ್ರಾಕ್ಟರ್ ಕಡೆಯಿಂದ ಕೆಲಸ ಮಾಡುತ್ತಿದ್ದೆನು. ತಿಂಗಳಿಗೆ ರೂ.36 ಸಾವಿರ ಸಂಬಳ ಕೊಡುತ್ತಿದ್ದರು. ಸಂಬಳ

ಕೊಡುತ್ತಿದ್ದ ಬಗ್ಗೆ ಹಾಗೂ ಕೆಲಸ ಮಾಡುತ್ತಿದ್ದ ಬಗ್ಗೆ ನೀವು ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ರೂ.36 ಸಾವಿರ ಸಂಬಳ ಬರುತ್ತಿದ್ದ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿ. ಸುಮಾರು 20 ಬಾರಿ ಹೊರರೋಗಿಯಾಗಿ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ವೈದ್ಯರು ಎಕ್ಸರೇ ತೆಗೆದು ನೋಡಿರುತ್ತಾರೆ. ಮುರಿದಿದ್ದ ಮೂಳೆಗಳು ಎಲ್ಲ ಕೂಡಿವೆ ಎಂದು ವೈದ್ಯರು ಹೇಳಿರುತ್ತಾರೆ ಆದರೆ ಕೆಲಸ ಮಾಡಲಾಗುವುದಿಲ್ಲ ಎಂದು ಹೇಳುತ್ತಾರೆ.

3. 8.00 ಗಂಟೆ ಕೆಲಸ ಇರುತ್ತದೆ. ಸಂಜೆ 7 ಗಂಟೆಗೆ ಕೆಲಸ ಮುಗಿಸಿಕೊಂಡು ಬರುತ್ತೇವೆ. ನೀವೇ ಸ್ವತಃ ಮದ್ಯಪಾನ ಮಾಡಿಕೊಂಡು ವಾಹನ ಚಲಾಯಿಸಿಕೊಂಡು ಹೋಗಿ ಕಾರಿಗೆ ಡಿಕ್ಕಿ ಪಡಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಪ್ರಸ್ತುತ ಫ್ಯಾಕ್ಟರಿಗೆ ಹೋಗುತ್ತಿಲ್ಲ. ನೀವು ಈಗಲೂ ಎಲ್ಲಾ ಕೆಲಸವನ್ನು ಮಾಡಲು ಸಶಕ್ತರಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**